**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.235/2023**

ಪಿ.ಡಬ್ಲ್ಯೂಃ 7

ಸಿ.ಡಬ್ಲ್ಯೂಃ 8

ಸಾಕ್ಷಿದಾರರ ಹೆಸರು ಃ ಕೃಷ್ಣ

ತಂದೆಯ ಹೆಸರುಃ ಃ ಕಣ್ಣನ್

ವಯಸ್ಸು ಃ **50 ವರ್ಷ**

ಉದ್ಯೋಗ ಃ ಕೂಲಿ ಕೆಲಸ

ವಾಸಸ್ಥಳ ಃ ಸಿದ್ದಿಪುರ ಗ್ರಾಮ

**ದಿನಾಂಕಃ 27-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ಚಾಸಾ-9 ಜಯರಾಂ ರವರ ಜೊತೆ ಅವರ ದ್ವಿಚಕ್ರ ವಾಹನದಲ್ಲಿ ನಾನು ಹಿಂಬದಿ ಸವಾರನಾಗಿ ಸಿದ್ದಿಪುರದಿಂದ ಕರಕುಚ್ಚಿ ಗ್ರಾಮಕ್ಕೆ 5-30 ಗಂಟೆ ಸಮಯದಲ್ಲಿ ಹೋಗುತ್ತಿದ್ದೇನು. ಆಗ ಸಿದ್ದಿಪುರ ಗ್ರಾಮದ ಹತ್ತಿರ ಕೆ ಎಸ್ ಆರ್ ಟಿ ಸಿ ಬಸ್ ಎಂದುರುಗಡೆಯಿಂದ ಬಂದು ಚಾಸಾ9 ರವರು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ. ಅಪಘಾತದ ಪರಿಣಾಮ ನನಗೆ ಬಲ ಕಾಲಿಗೆ ಪೆಟ್ಟಾಗಿ ಮೂಳೆ ಮುರಿದಿರುತ್ತದೆ. ಶಿವಮೊಗ್ಗದ ಆರೈಕೆ ಆಸ್ಪತ್ರೆಯಲ್ಲಿ 20 ದಿವಸಗಳ ಕಾಲ ಚಿಕಿತ್ಸೆ ಪಡೆದುಕೊಂಡು ಅಪರೇಷನ್ ಮಾಡಿಸಿಕೊಂಡಿರುತ್ತೇನೆ. ಚಾಸಾ-9 ರವರಿಗೆ ಕಾಲಿಗೆ ಹಾಗೂ ಭುಜಕ್ಕೆ ಪೆಟ್ಟಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **08-07-2022** ರಂದು ಸಂಜೆ **5-30** ಗಂಟೆ ಸಮಯದಲ್ಲಿ ಚಾಸಾ-**9** ರವರ ಬೈಕ್ನಂ. ಕೆಎ **14** ಯು **7877** ಬೈಕಿನಲ್ಲಿ ಹಿಂಬದಿಯಲ್ಲಿ ಕುಳಿತುಕೊಡಯಿ ಸಿದ್ದೇಗೌಡ ಸರ್ಕಲ್ ನಿಂದ ಸಿದ್ದಿಪುರ ಗ್ರಾಮಕ್ಕೆ ಹೋಗುವ ಟಾರು ರಸ್ತೆಯಲ್ಲಿ ಮರಿಗೌಡರವರ ತೋಟದ ಹತ್ತಿರ ಹೋಗುತ್ತಿರುವಾಗ ಕೆ

ಎಸ್ ಆರ್ ಟಿ ಸಿ ಬಸ್ ಚಾಲಕ ಕೊಳ್ಳಿ ಬಸವರಾಜುರವರು ಕೆಎ 17 ಎಫ್ 1336 ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿರುತ್ತಾರೆಂದರೆ ಸರಿ. ಆರೋಪಿಯ ನಿರ್ಲಕ್ಷತನದಿಂದಲೇ ಸದರಿ ಅಪಘಾತವಾಗಿದೆ ಎಂದರೆ ಸರಿ. ಈ ಸಂಬಂಧ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎ ಆರ್ ಕೆ **ವಕೀಲರಿಂದ.**

ದ್ವಿಚಕ್ರ ವಾಹನದಲ್ಲಿ ನಾನು, ಮುನಿಸ್ವಾಮಿ, ಜಯರಾಂ ಬರುತ್ತಿದ್ದೆವು ಎಂದರೆ ಸರಿ. ಸಿದ್ದೇಗೌಡ ಸರ್ಕಲ್ ನಿಂದ ಮರಿಗೌಡರವರ ತೋಟದವರೆಗೂ ಟಾರು ರಸ್ತೆ ಡೊಂಕಾಗಿದೆ ಎಂದರೆ ಸರಿ. ಆದ್ದರಿಂದ ಆ ಸ್ಥಳದಲ್ಲಿ ಯಾವುದೇ ವಾಹನಗಳು ನಿಧಾನವಾಗಿ ಚಲಿಸಬೇಕಾಗಿರುತ್ತದೆ ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ಉದ್ದವಾಗಿದ್ದ ಕಾರಣ ಸದರಿ ಬಸ್ ಕೂಡ ಸದರಿ ಸ್ಥಳದಲ್ಲಿ ನಿಧಾನವಾಗಿ ತಿರುವು ತೆಗೆದುಕೊಂಡು ಬರುತ್ತಿತ್ತು ಎಂದರೆ ಸರಿ. ನನಗೆ ಈ ಹಿಂದೆ ಎರಡು ವರ್ಷಗಳ ಹಿಂದೆ ಒಂದು ಅಪಘಾತವಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ನಿಮಗೆ ಕೈಗೆ ಹಾಗೂ ಕಾಲಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ ನಿಮಗೆ ಬಲಗಾಲಿಗೆ ಪೆಟ್ಟಾಗಿದ್ದು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಿರಿ ಎಂದರೆ ಸರಿಯಲ್ಲ. ಚಾಸಾ-೨ ರವರು ಅವರ ದ್ವಿಚಕ್ರ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆ ಎಸ್ ಆರ್ ಟಿ ಸಿ ಹಿಂಬದಿಯ ಬಸ್ ಭಾಗಕ್ಕೆ ತಾಗಿಸಿರುತ್ತಾರೆಂದರೆ ಸರಿಯಲ್ಲ. ಆದ್ದರಿಂದ ಚಾಸಾ-೨ ರವರ ನಿರ್ಲಕ್ಷತದಿಂದ ಸದರಿ ಅಪಘಾತ ಸಂಭವಿಸಿರುತ್ತದೆ, ಆರೋಪಿಯ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ. ಅಪಘಾತವಾದ ವಿಚಾರವಾಗಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿ. ಪರಿಹಾರವನ್ನು ಪಡೆಯಲು ಆರೋಪಿಯ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**